ಜನಗಳಿಗೆ ಅನುಕೂಲ ಮಾಡುವುದಕ್ಕೆ ಈಗಿರತಕ್ಕಂಥ ಸಿಸ್ಟಮ್‌ನಲ್ಲಿ ಸಾಧ್ಯವಾದರೆ ಅದಕ್ಕೆ ಕೂಡ ನಾನು ತಯಾರಿದ್ದೇನೆ. ಅದನ್ನು ನಾನು ರೂಲ್ ಔಟ್ ಮಾಡುತ್ತಿಲ್ಲ ಆದರೆ ನಾನು ಬೈರೇಗೌಡರಿಗೆ ಹೇಳತಕ್ಕಂಥದ್ದು "ವ್ರತ ಕೆಟ್ಟರೂ ಸುಖ ಸಿಗಬೇಕಲ್ಲ". ನಮಗೆ ಆದ್ದರಿಂದ ನಮ್ಮ ಸಿಸ್ಟಮ್ ಏನು ಇದೆ, ನಮ್ಮ ಗ್ರಿಡ್ ಏನು ಇದೆ ಯಾವ ಯಾವ ಲೈನ್ ಎಷ್ಟೆಷ್ಟು ಸಾಮರ್ಥ್ಯದ ಪವರ್ ಎನರ್ಜಿಯನ್ನು ತೆಗೆದುಕೊಂಡು ಹೋಗಬಲ್ಲದು ಬಾಗೆಪಲ್ಲಿಗೆ ಶಿಡ್ಲಘಟ್ಟಕ್ಕೆ, ಚಿಂತಾಮಣಿಗೆ, ಚಿಕ್ಕಾಬಳ್ಳಾಪುರಕ್ಕೆ, ಗೌರಿಬಿದನೂರಿಗೆ ಬೆಳಗಾವಿಗೆ ಎನ್ನತಕ್ಕಂಥದ್ದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ಸಾಯಂಕಾಲ ಹೇಗಿದ್ದರೂ ತಾವು ಬರುತ್ತೀರಿ ಇದನ್ನು ಕೂಡ ಪ್ರಧಾನವಾಗಿ ಅಲ್ಲಿ ಚರ್ಚೆ ಮಾಡೋಣ. ಶಿವಪುರ ವಿಚಾರ ಹೇಳಿದಿರಿ. ಈಗಾಗಲೇ ಒಂದು ಘಟಕ ಅಲ್ಲಿ ಕಾರ್ಯಾಚರಣೆ ಮಾಡುತ್ತಾ ಇದೆ. ಅದು ನಮ್ಮ ಕೆ.ಇ.ಬಿ. ಗೆ ಅಲ್ಲಿ ಜನರೇಟ್ ಆಗತಕ್ಕಂಥ ಪವರ್‌ನ್ನು ಸಿಂಕ್ರನೈಜ್ ಮಾಡಿದ್ದಾರೆ. ಇನ್ನು ಒಂದು ಘಟಕದ ಬಗ್ಗೆ ನೀರಾವರಿ ಇಲಾಖೆಯಿಂದ ಕೆಲವು ಆಕ್ಷೇಪಣೆಗಳು ಬಂದಿತ್ತು. ಆದರ ಬಗ್ಗೆಯೂ ಕೂಡ ನಾಳೆ ಒಂದು ತೀರ್ಮಾನ ತೆಗೆದುಕೊಳ್ಳೋಣ ಮತ್ತು ಚಾಮರಾಜನಗರದಲ್ಲಿ ವಿದ್ಯುಚ್ಛಕ್ತಿ ಬಹಳ ಹಳಿ ತಪ್ಪುತ್ತಿದೆ ಎನ್ನತಕ್ಕಂತದ್ದನ್ನು ಮಾನ್ಯ ವಾಟಾಳ್ ನಾಗರಾಜ್‌ರವರು ಸದನದ ಒಳಗೂ ಹೇಳಿದ್ದಾರೆ. ಹೊರಗಡೆಗೂ ನನಗೆ ಹೇಳಿದ್ದಾರೆ ಅದನ್ನು ಕೂಡ ನಾಳೆ ನಾವು ನೀವು ಸೇರಿ ಸರಿಪಡಿಸುವ ಪ್ರಯತ್ನ ಮಾಡೋಣ.

ಶ್ರೀ ಆರ್.ಎಲ್. ಜಾಲಪ್ಪ:– ಯಲಹಂಕದ ಡೀಸೆಲ್ ಜನರೇಟರ್ ಗತಿ ಏನು ಆಯಿತು.

ಶ್ರೀ ಎಸ್.ಎಂ. ಕೃಷ್ಣ:– ಈ ಮಾರ್ಚ್ ತಿಂಗಳಲ್ಲಿ ಕಾರ್ಯಗತ ಮಾಡುವುದಕ್ಕೆ ಏರ್ಪಾಡುಗಳನ್ನು ಮಾಡುತ್ತೇವೆ.

ಅಧ್ಯಕ್ಷರು:– ಈಗ ಸಭೆಯು ಇಲ್ಲಿಗೆ ಮುಕ್ತಾಯವಾಗಿ ಮತ್ತೆ 4 ಗಂಟೆಗೆ ಸೇರುತ್ತದೆ.

(ಸದನವು ಮಧ್ಯಾಹ್ನ 2.04 ಗಂಟೆಗೆ ಮುಕ್ತಾಯವಾಗಿ ಮತ್ತೆ 4 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು.)

(ಶ್ರೀ ವಿ.ಎಸ್. ಕೌಜಲಗಿಯವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದ್ದರು)

ನಿಯಮ 334ರ ಮೇರೆಗೆ

ಶ್ರೀ ಶಿವಾನಂದ ಎಚ್. ಕೌಜಲಗಿ:– ಅಧ್ಯಕ್ಷರೆ ಮಾನ್ಯ ಗುರುಪಾದಪ್ಪ ನಾಗ್ಮಾರಪಳ್ಳಿಯವರು ಅವರ ವಿಚಾರವನ್ನು ಪ್ರಸ್ತಾಪಿಸಲು ನನಗೆ ಆಥರೈಸ್ ಮಾಡಿದ್ದಾರೆ.

MR. SPEAKER:– It cannot be authorised.

1. ಹಾಸನ ಬಸ್ ನಿಲ್ದಾಣಕ್ಕೆ ನುಗ್ಗುತ್ತಿದ್ದ ನೀರನ್ನು ತಡೆಯಲು ಕೈಗೊಂಡ ಕಾಮಗಾರಿಯಲ್ಲಿ ವಿಧಾನ

ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ):– ಸನ್ಮಾನ್ಯ ಅಧ್ಯಕ್ಷರೇ, ಹಾಸನ ಪುರಸಭೆಯವರು ಹಾಸನದ ಸಿಟಿಯ ಬಸ್‌ಸ್ಟ್ಯಾಂಡಿಗೆ ನುಗ್ಗುತ್ತಿದ್ದ ಮಳೆಯ ನೀರನ್ನು ಬಸ್‌ಸ್ಟ್ಯಾಂಡಿನ ಪೂರ್ವಭಾಗದಿಂದ ಚರಂಡಿಯ ಮುಖಾಂತರ ಹಾದು ಹೋಗುವಂತೆ ಅನುಕೂಲ ಕಲ್ಪಿಸಲು ಒಂದು ವರ್ಷದ ಹಿಂದೆ ಸುಮಾರು 27 ಲಕ್ಷ ರೂ.ಗಳ ಅಂದಾಜಿನಲ್ಲಿ ಚರಂಡಿಯ ಕೆಲಸವನ್ನು ಪ್ರಾರಂಭಿಸಿ ಈ ಕೆಲಸವನ್ನು ಪೂರೈಸದೆ ಇರುವುದರಿಂದ ಈ ರಸ್ತೆಯಲ್ಲಿ ತಿರುಗಾಡುವ ಜನರಿಗೆ ತೊಂದರೆಯಾಗಿರುತ್ತದೆ. ಹಾಗೂ ಈ ಕೆಲಸಕ್ಕೆ ಕೆ.ಎಸ್.ಆರ್.ಟಿ.ಸಿ. ತಮ್ಮ ವಂತಿಗೆ ಹಣವನ್ನು ಪೂರ್ಣ ಬಿಡುಗಡೆ ಮಾಡಿರುತ್ತದೆ. ಈ

ಕೆಲಸದ ಕಾಮಗಾರಿಯನ್ನು ಹಾಸನ ಪುರಸಭೆಯವರು ವಿನಾಕಾರಣ ಮುಂದೂಡುತ್ತಾ ಜನರಿಗೆ ತೊಂದರೆ ಕೊಡುತ್ತಿದ್ದಾರೆ. ಈ ಬಗ್ಗೆ ಮಾನ್ಯ ಸಚಿವರು ಸಂಬಂಧಿಸಿದ ಅಧಿಕಾರಿ ವರ್ಗದವರಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಆದೇಶ ನೀಡಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಚೌಡರೆಡ್ಡಿ(ನಗರಾಭಿವೃದ್ಧಿ ಸಚಿವರು):– ಮಾನ್ಯ ಅಧ್ಯಕ್ಷರೆ, ಹಾಸನ ಸಿಟಿಯ ಬಸ್ ಸ್ಟ್ಯಾಂಡಿಗೆ ನುಗ್ಗುತ್ತಿದ್ದ ಮಳೆಯ ನೀರನ್ನು ತಡೆಯುವ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನಿಸಿದ್ದಾರೆ. ಸದರಿ ಬಸ್ ಸ್ಟ್ಯಾಂಡಿನಲ್ಲಿ ನುಗ್ಗುತ್ತಿದ್ದ ನೀರನ್ನು ತಡೆಯುವ ಕ್ರಮವಾಗಿ ಹಾಸನ ನಗರಸಭೆಯು ಆರ್.ಸಿ.ಸಿ. ಚರಂಡಿ ನಿರ್ಮಾಣ ಕೆಲಸ ಕೈಗೆತ್ತಿಕೊಂಡಿದ್ದು, ಆ ಹಂತದಲ್ಲಿ ನಗರಸಭೆಯು ಕೆಲವೊಂದು ನಿಯಮಗಳನ್ನು ಉಲ್ಲಂಘನೆ ಮಾಡಿರುವುದಾಗಿ ಆರೋಪ ಬಂದಿದ್ದು, ಮತ್ತು ಇತರೆ ಆರೋಪಗಳ ಬಗ್ಗೆ 1964ರ ಕರ್ನಾಟಕ ಪುರಸಭೆಗಳ ಕಾಯ್ದೆಯ ಕಲಂ 316ರ ಪ್ರಕಾರ ಹಾಸನ ನಗರಸಭೆಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಕಾರಣ ಕೇಳಿ ಅಂದರೆ ಹಾಸನ ನಗರಸಭೆಯನ್ನು ಏಕೆ ರದ್ದುಪಡಿಸಬಾರದೆಂಬುದರ ಬಗ್ಗೆ ನೋಟೀಸನ್ನು ದಿನಾಂಕ : 12.2.1993 ಮತ್ತು 15.2.1993ರಂದು ಪೌರಾಯುಕ್ತರ ಮುಖಾಂತರ ನೀಡಲಾಗಿದೆ. ಸದರಿ ನೋಟೀಸಿಗೆ ಉತ್ತರ ಬಂದ ನಂತರ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

ಹಾಸನ ಸಿಟಿಯ ಬಸ್‌ಸ್ಟ್ಯಾಂಡಿಗೆ ಈಗಲೂ ನೀರು ನುಗ್ಗುತ್ತಿರುವುದು ಮುಂದುವರಿದಲ್ಲಿ ಇದಕ್ಕೆ ಬೇಕಾದ ಕಾಮಗಾರಿಗಳನ್ನು ಕೂಡಲೇ ಕೈಗೆತ್ತಿಕೊಳ್ಳುವಂತೆ ಹಾಸನ ನಗರಸಭೆಗೆ ಸೂಕ್ತ ನಿರ್ದೇಶನ ನೀಡಲಾಗುವುದು.

ಶ್ರೀ ಕೆ.ಹೆಚ್. ಹನುಮೇಗೌಡ:– ಸ್ವಾಮಿ ಜನರು ಚರಂಡಿಯೊಳಗೆ ಬೀಳುತ್ತಿದ್ದಾರೆ. ಹುಡುಗರು, ಮಕ್ಕಳು ಬೀಳುತ್ತಿದ್ದಾರೆಂದು ನಾನು ಹೇಳಿದರೆ ನೀವು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದೀರಿ, ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಅದನ್ನು ಹೇಳಿ ನಾನು 334 ಅಡಿಯಲ್ಲಿ ಪ್ರಶ್ನೆ ಕೇಳಿದ್ದು ಅವರು ಹೇಳಿದ್ದನ್ನು ಕೇಳಿ ಸುಮ್ಮನೆ ಕುಳಿತುಕೊಳ್ಳಲು ಆಲ್ಲ.

(2) ಕೌಂಡಿನ್ಯ ನದಿಗೆ ಅಡ್ಡಲಾಗಿ ಕಟ್ಟುವ ಸೇತುವೆ.

ಶ್ರೀ ಎಂ.ವಿ. ವೆಂಕಟಪ್ಪ:– ಮಾನ್ಯ ಅಧ್ಯಕ್ಷರೇ, ಮುಳಬಾಗಲು ತಾಲ್ಲೂಕಿನಲ್ಲಿ ಕೌಂಡಿನ್ಯ ನದಿಗೆ ಅಡ್ಡಲಾಗಿ ಒಂದು ಸೇತುವೆಯನ್ನು ಕಟ್ಟಲು ಸುಮಾರು ಮೂರು ವರ್ಷಗಳಿಂದ ಒತ್ತಾಯಿಸುತ್ತಿದ್ದೇನೆ. ಇದಕ್ಕೆ ಸುಮಾರು 6 ಲಕ್ಷ ರೂ.ಗಳನ್ನು ಕೋಲಾರ ಜಿಲ್ಲಾ ಪರಿಷತ್ತಿನವರು ಅಂದಾಜು ಮಾಡಿ 92–93 ನೇ ಬಜೆಟ್‌ನಲ್ಲಿ ನಮೂದಿಸಲಾಗಿತ್ತು. ಇದನ್ನು 93ನೇ ಮಾರ್ಚ್‌ಯೊಳಗೆ ಪ್ರಾರಂಭ ಮಾಡಬೇಕಾಗಿತ್ತು. ಆದರೆ ಈಗ ಇದನ್ನು ಪ್ರಾರಂಭ ಮಾಡುವ ಯಾವ ಸೂಚನೆಯೂ ಕಾಣುತ್ತಿಲ್ಲ. ಈಗ ಪ್ರಾರಂಭ ಮಾಡದಿದ್ದ ಪಕ್ಷದಲ್ಲಿ ಪುನಃ ಮಳೆಗಾಲ ಪ್ರಾರಂಭವಾಗಿ ಮತ್ತೊಂದು ವರ್ಷ ನಿಧಾನವಾಗುವ ಪರಿಸ್ಥಿತಿ ಇದೆ. ಇದಕ್ಕೆ ಕಾರಣಗಳೇನು ? ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ನಿಧಾನ ಪ್ರವೃತ್ತಿಯಿಂದ ಜನತೆ ಕಂಗಾಲಾಗಿದ್ದಾರೆ ದಿನವೂ ಸಾವಿರಾರು ಜನರಿಗೆ ತೊಂದರೆಯಾಗುತ್ತಿದೆ. ಮಾರ್ಚ್, 93ರೊಳಗೆ ಪ್ರಾರಂಭ ಮಾಡಲು ಕೂಡಲೇ ಕಾರ್ಯಕ್ರಮ ಕೈಗೊಳ್ಳುವುದು ಮತ್ತು ಇದು ನಿಧಾನವಾಗುವುದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್:– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಾಸ್ತಾಪಿಸಿದ ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತಂದು ಉತ್ತರವನ್ನು ಒದಗಿಸಿಕೊಡುತ್ತೇನೆ.